**ಸಾಕ್ಷಿಯನ್ನು ದಿಃ 20.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅರ್ಜಿದಾರ ವಿಶಾಲ್ ನನ್ನ ಮಗ. ಅಪಘಾತವು ದಿಃ 30.03.2023 ರಂದು ಆಗಿರುತ್ತದೆ. ಅಪಘಾತವು ವಿನೋಭ ಕಾಲೋನಿಯಲ್ಲಿರುವ ಹಾಲಿನ ಡೈರಿಯ ಬಳಿ ಆಗಿರುತ್ತದೆ. ರಸ್ತೆಯಲ್ಲಿ ಮೆರವಣಿಗೆ ಹೋಗುತ್ತಿತ್ತು ಆ ಸಮಯದಲ್ಲಿ ಅಪಘಾತ ಆಗಿರುತ್ತದೆ. ಅಪಘಾತ ಆದ ತಕ್ಷಣ ಹುಣಸೂರಿನ ವಿಕ್ರಮ್ ಆಸ್ಪತ್ರೆಗೆ ಹೋಗಿರುತ್ತೇವೆ. ಆನಂತರ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಅದೇ ದಿನ ಬಂದಿರುತ್ತೇವೆ. ಹುಣಸೂರು ಆಸ್ಪತ್ರೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಉದ್ದೇಶಪೂರ್ವಕವಾಗಿ ಹಾಜರು ಪಡಿಸಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಪೋಲೀಸರಿಗೆ ದೂರನು ನಾನೇ ದಾಖಲಿಸಿರುತ್ತೇನೆ. ನಿಪಿ. 1 ರ ಪ್ರಕಾರ ನಾನು ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಅಲ್ಲೇ ಇದ್ದೇ ಎಂದು ಉತ್ತರಿಸಿರುತ್ತಾರೆ. ನಿಪಿ. 1 ರಲ್ಲಿ ಕೃತ್ಯವನ್ನು ಕೇಳಿರುತ್ತೇನೆ ಎಂದು ನಮೂದಾಗಿದೆ ಎಂದರೆ ಇಲ್ಲ ಎಂದು ಉತ್ತರಿಸಿರುತ್ತಾರೆ. ಕೆ.ಆರ್. ಆಸ್ಪತ್ರೆಯ ದಾಖಲೆಯನ್ನು ಉದ್ದೇಶಪೂರ್ವಕವಾಗಿ ಹಾಜರು ಪಡಿಸಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ಹಾಜರು ಪಡಿಸದೇ ಇರುವ ಕಾರಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಕೆ.ಆರ್. ಆಸ್ಪತ್ರೆಯಲ್ಲಿ ಎರಡು ದಿನ ಇದ್ದು ಮೂರನೇ ತಾರೀಖಿನಂದು ಕೆನ್ನಾಳು ಆಸ್ಪತ್ರೆಗೆ ಹೋಗಿರುತ್ತೇವೆ. ನಿಪಿ.5 ರ ಪ್ರಕಾರ ದಿಃ 30.03.2023 ರಂದು ಕೆನ್ನಾಳು ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸಾಕ್ಷಿಯು ಎರಡು ದಿನದ ನಂತರ ಹೋಗಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಿಪಿ. 5 ಅನ್ನು ಸೃಷ್ಠಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದೂರನ್ನು ಯಾವಾಗ ದಾಖಲಿಸಿರುತ್ತೇನೆ ಎಂದು ದಿನಾಂಕ ನೆನಪಿಲ್ಲ. ಎರಡು ದಿನ ತಡವಾಗಿ ದೂರು ನೀಡಿರುತ್ತೇನೆ ಎಂದರೆ ಸಾಕ್ಷಿಯು ಗಾಬರಿಯಲ್ಲಿದ್ದೇವು ಎಂದು ಉತ್ತರಿಸಿರುತ್ತಾರೆ. ಪ್ರಶ್ನಿತ ವಾಹನವನ್ನು ಈ ಪ್ರಕರಣದಲ್ಲಿ ಸಿಲುಕಿಸಲು ಎರಡು ದಿನ ತಡವಾಗಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಔಷಧಿ ಪಾವತಿ ರಶೀದಿಗಳನ್ನು ಪರಿಹಾರಕ್ಕಾಗಿ ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ. 9 ರಲ್ಲಿ ಯಾತಕ್ಕಾಗಿ ಆಸ್ಪತ್ರೆಗೆ

ದಾಖಲಾಗಿರುತ್ತಾರೆ ಎಂದು ನಮೂದಾಗಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ನಿಪಿ. 9 ರ ಪ್ರಕಾರ ಯಾವುದೇ ಅಪಘಾತ ಆಗಿರುವುದಿಲ್ಲ ಎಂದು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಪಡಿಸಿತು ಎನ್ನಲಾದ ವಾಹನ ಸಂಖ್ಯೆ 3390 ಪಲ್ಸರ್ ವಾಹನ ಆಗಿರುತ್ತದೆ. ನಾನು ಹೇಳಿದ ದೂರನ್ನು ಪೋಲೀಸರು ಬರೆದುಕೊಂಡಿರುತ್ತಾರೆ. ಆರೋಪಿ ವೆಂಕಟೇಶ್ ನನಗೆ ಪರಿಚಯ ಎಂದರೆ ಸರಿಯಲ್ಲ. ನಾನು, ಆರೋಪಿ ಮತ್ತು 1 ನೇ ಎದುರುದಾರರು ಸೇರಿ ಪ್ರಶ್ನಿತ ವಾಹನವನ್ನು ಸಿಲುಕಿಸಿರುತ್ತೇವೆ ಎಂದರೆ ಸರಿಯಲ್ಲ. ವೆಂಕಟೇಶ್ ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ. 3 ರಲ್ಲಿ ಕಾಣಿಸಿರುವ ಸ್ಕೆಚ್ ಪ್ರಕಾರ ಅಪಘಾತವು ರಸ್ತೆಯ ಮಧ್ಯಭಾಗದಲ್ಲಿ ಆಗಿದೆ ಎಂದರೆ ಸಾಕ್ಷಿಯು ಅವರು ಏನು ಬರೆದಿರುತ್ತಾರೆ ಎಂದು ಗೊತ್ತಿಲ್ಲ ನಾವು ಎಡಭಾಗದಲ್ಲಿ ಇದ್ದೇವು ಎಂದು ಉತ್ತರಿಸಿರುತ್ತಾರೆ. ನಿಪಿ. 4 ರಲ್ಲಿ ಪ್ರಶ್ನಿತ ವಾಹನಕ್ಕೆ ಜಖಂ ಆಗಿರುವುದಿಲ್ಲ ಎಂದು ಕಾಣಿಸಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ.

ಅಮಾನತ್ ಮಹಜರ್ ಅನ್ನು ಉದ್ದೇಶಪೂರ್ವಕವಾಗಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಲಂ 133 ರ ನೋಟೀಸ್ ಮತ್ತು ಉತ್ತರವನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ 4 ನೇ ತರಗತಿಯಲ್ಲಿ ಓದುತ್ತಿದ್ದ, ಈಗ 6 ನೇ ತರಗತಿಯಲ್ಲಿ ಓದುತ್ತಿದ್ದಾನೆ. ನನ್ನ ಮಗನಿಗೆ ಅಪಘಾತದಿಂದ ಯಾವುದೇ ಗಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.